ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

6ನೇ ವರ್ಷ 17ನೇ ಸಂಚಿಕೆ ಕೊಪ್ಪ 20-12-1987 ಭಾನುವಾರ ಬೆಲೆ 50 ಪೈಸೆ

ಬಸ್ರಿಕಟ್ಟೆಯಲ್ಲಿ ತಾ|| ಯುವ ಮೇ[illegible]

ಬಸರಿಕಟ್ಟೆ : ಇಲ್ಲಿನ ಝಾನ್ಸಿ ಯುವತಿ ಮಂಡಲಿ, ಕೊಪ್ಪ ತಾ|| ಯುವಜನ ಒಕ್ಕೂಟ ಮತ್ತು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಕೊಪ್ಪ ತಾ|| ಯುವಜನ ಮೇಳ ಇಲ್ಲಿ ಜ. 2 ಮತ್ತು 3ರಂದು ನಡೆಯಲಿದೆ.

ಸುಮಾರು 500 ಜನ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆಯೆಂದು ತಾ|| ಯುವಜನ ಒಕ್ಕೂಟದ ಅಧ್ಯಕ್ಷ [illegible] ನಾಗಭೂಷಣ್ ತಿಳಿಸಿದ್ದಾರೆ. ಕೊಪ್ಪ [illegible] ತಹಸೀಲ್ದಾರ್ ಮತ್ತು [illegible] ಅಧಿಕಾರಿಗಳ ನೆರವಿನೊಂದಿಗೆ ಕಾರ್ಯಕ್ರಮದ ಸಿದ್ಧತೆ ನಡೆಯುತ್ತಿರುವುದಾಗಿಯೂ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳನ್ನು ಸಹಾಯಕ ಯುವಜನ ಸೇವಾಧಿಕಾರಿ ಪಿ. ಕರುಣಾ ಚಂದ್ರ ಅವರಿಂದ ಪಡೆಯಬಹುದು.

ಪ್ರತಿಭಟನೆ

ಕಲ್ಲುಗಡ್ಡೆ : ಈ ಗ್ರಾಮದಲ್ಲಿ ಈಚೆಗೆ ಅರಣ್ಯ ಇಲಾಖೆಯುವರು ಸಾರ್ವಜನಿಕ ಉಪಯೋಗದಲ್ಲಿರುವ ಸರ್ಕಾರಿ ಭೂಮಿಯನ್ನು ಸರ್ವೆ ಮಾಡಿ ಬಾಂದ್ ಕಲ್ಲುಗಳನ್ನು ಹಾಕುತ್ತಿರುವುದನ್ನು ಪ್ರತಿಭಟಿಸಿ, ಗ್ರಾಮಸ್ಥರು ಬಿಳಾಲುಕೊಪ್ಪದ ಮಂಡಲ ಪಂಚಾಯ್ತಿ ಕಛೇರಿವರೆಗೆ ಮೌನ ಮೆರವಣಿಗೆ ನಡೆಸಿದರು. ಪ್ರಧಾನರೊಡನೆ ಗ್ರಾಮದ ಸಮಸ್ಯೆಗಳ ಬಗ್ಗೆ ಅನೌಪಚಾರಿಕ ಚರ್ಚೆಯನ್ನೂ ನಡೆಸಿದರು.

(ವರದಿ: ತ. ಕೃ. ವಿ. ಮೂರ್ತಿ)

ಆನಂದಪುರಂ ಕೊಲೆ ಆಪಾದಿತರಿಗೆ ಮರಣದಂಡನೆಯ ತೀರ್ಪು

ತೀರ್ಥಹಳ್ಳಿ : ಇಲ್ಲಿಗೆ ಸಮೀಪದ ಆನಂದಪುರದ ರೈತ ಬಂಧು ಗ್ರಾಮೋದ್ಯೋಗ ಸಂಸ್ಥೆಯ ನಾಲ್ವರು ನೌಕರರನ್ನು 1983ರ ಆಗಸ್ಟ್ 28ರಂದು ಕೊಲೆ ಮಾಡಿ ಅವರ ಬಳಿಯಿಂದ 1,15,000 ರೂ.ಗಳನ್ನು ಅಪಹರಿಸಿದ್ದ ಕೆ. ಟಿ. ಮಹಮ್ಮದ್ ಮತ್ತು ಟಿ ಎಸ್. ಚಂದ್ರಶೇಖರ ಎಂಬಿಬ್ಬರಿಗೆ ರಾಜ್ಯದ ಉಚ್ಚ ನ್ಯಾಯಾಲಯ ಮರಣ ದಂಡನೆಯ ತೀರ್ಪು ನೀಡಿದೆ.

ಶಿವಮೊಗ್ಗ ಸೆಶನ್ಸ್ ನ್ಯಾಯಾಧೀಶರು ಆರೋಪಿಗಳಿಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೆಚ್ಚಿಸಬೇಕೆಂದು ಸರ್ಕಾರವು ಸಲ್ಲಿಸಿದ್ದ ಅಪೀಲನ್ನು ಅಂಗೀಕರಿಸಿದ ನ್ಯಾ|| ದೇಸಾಯಿ ಮತ್ತು ನ್ಯಾ|| ರಾಮಕೃಷ್ಣ ಡಿ. 9ರಂದು ಈ ತೀರ್ಪು ನೀಡಿದ್ದಾರೆ. ಶಿಕ್ಷೆಯ ವಿರುದ್ಧ ಆರೋಪಿಗಳ ಅಪೀಲನ್ನು ವಜಾ ಮಾಡಿದ್ದಾರೆ.

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ, "ಇದೊಂದು ಅಮಾನುಷ ಮತ್ತು ಪಾಶವೀ ಕೃತ್ಯ; ಮರಣದಂಡನೆ ವಿಧಿಸಲು ಅರ್ಹವಾದ, ಅಪರೂಪದಲ್ಲಿ ಅಪರೂಪವಾದ ದುರ್ಘಟನೆ" ಎಂದಿದ್ದಾರೆ.

(ಆಧಾರ : ತೀರ್ಥಹಳ್ಳಿ ಗ್ರಾಮಭಾರತಿ.)

* * *

ಘಟನೆಯ ನೆನಪು

1983ರ ಆಗಸ್ಟ್ 26, 27ರಂದು ದಕ್ಷಿಣ ಕನ್ನಡದಿಂದ ಅಕ್ಕಿ, ಅವಲಕ್ಕಿ ವ್ಯಾಪಾರ ಮುಗಿಸಿ ಎರಡು ಲಾರಿಗಳಲ್ಲಿ ಡ್ರೈವರ್‌ಗಳಾದ ವಿಶ್ವನಾಥ ರೈ, ಮಂಜುನಾಥ ಮತ್ತು ಸೇಲ್ಸ್‌ಮನ್‌ಗಳಾದ ಲೋಕೇಶ್, ಶಿವಪ್ಪ ಇವರುಗಳು ವಾಪಸಾಗುತ್ತಿದ್ದರು. ಲೋಕೇಶನ ವಶ 1 ಲಕ್ಷ 15 ಸಾವಿರ ರೂ. ಇತ್ತು. ಮಹಮ್ಮದ್ ಮತ್ತು ಚಂದ್ರಶೇಖರ ಹಿಂದೆ ಅದೇ ಸಂಸ್ಥೆಯಲ್ಲಿ ಉದ್ಯೋಗಿಗಳಾಗಿದ್ದು ಹಾಲಿ ತಾವೇ ಪಾಲುದಾರರಾಗಿ ಒಂದು ಲಾರಿ ಕೊಂಡಿದ್ದರು. ಅವರ ಲಾರಿಯೂ ಅವಲಕ್ಕಿ ಸಾಗಣೆಗೆ ಹೋಗುತ್ತಿದ್ದರಿಂದ ಅದನ್ನು ಒಯ್ಯುತ್ತಿದ್ದ ಮಹಮ್ಮದನಿಗೆ ಲೋಕೇಶನ ಬಳಿ ಇದ್ದ ಹಣದ ಪ್ರಮಾಣ ಗೊತ್ತಿತ್ತು.

ಆಕಸ್ಮಿಕವಾಗಿ ಕುಂದಾಪುರದಲ್ಲಿ ಚಂದ್ರಶೇಖರನೂ ಭೇಟಿಯಾಗಿ, ಇಬ್ಬರೂ ಸಂಚು ಹೂಡಿಕೊಂಡು ಅದೇ ಲಾರಿಗಳನ್ನು ಹತ್ತಿಕೊಂಡು ಪ್ರಯಾಣ ಮಾಡಿದ್ದರು. ಆದರೆ ದಾರಿಯಲ್ಲಿ ಹಣ ಅಪಹರಿಸಲಾಗಲಿಲ್ಲ. ಕೊನೆಗೆ ನಾಲ್ವರನ್ನೂ ಕೊಲೆಗೈದು ಹಣದೊಂದಿಗೆ ಪರಾರಿಯಾದರು.

ಆದರೆ ಮೂರೇ ದಿನದೊಳಗೆ ತೀರ್ಥಹಳ್ಳಿ ಮತ್ತು ಶಿವಮೊಗ್ಗದ ಪೋಲೀಸರ ಕೈಗೆ ಹಣದ ಸಮೇತ ಸಿಕ್ಕಿಬಿದ್ದರು. ಈ ಘಟನೆಯ ಬಗ್ಗೆ 4.9.83 ಮತ್ತು 11.9.83ರ ಸಂಚಿಕೆಗಳಲ್ಲಿ 'ಮುಂಜಾವು' ವರದಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಇಡೀ ಭಾರತದ ಜನ ಅಖಂಡವಾಗಿ ಒಂದಾಗಿ ಬಾಳಬೇಕೆಂದು ಶ್ರಮಿಸಿದ ಡಾ|| ಅಂಬೇಡ್ಕರ್‌ಗೆ ಶ್ರದ್ಧಾಂಜಲಿ

ಇಡೀ ಭಾರತದ ಜನತೆ ಅಖಂಡವಾಗಿ ಒಂದಾಗಿ ಬಾಳಬೇಕೆಂಬ ಕನಸು ಕಂಡು, ಆ ಕನಸು ನನಸಾಗಿಸಲು ತಮ್ಮ ಜೀವಮಾನ ಪೂರ್ತಿ ಹೋರಾಡಿದ ಡಾ|| ಅಂಬೇಡ್ಕರ್ ಅವರನ್ನು ನಮ್ಮ ದೇಶ ಕೇವಲ ಹರಿಜನರ ನಾಯಕ ಎಂದು ಹೆಸರಿಸುತ್ತಿರುವುದು ಅಂಬೇಡ್ಕರ್‌ರಿಗೆ ತೋರಿಸಿದ ಅಗೌರವ ಎಂದು ಶೃಂಗೇರಿಯ ಜೆ. ಸಿ. ಬಿ. ಎಂ. ಕಾಲೇಜಿನ ಉಪನ್ಯಾಸಕರಾದ ಕೆ.ಪುಟ್ಟಯ್ಯ ಹೇಳಿದ್ದಾರೆ.

ಡಿ. 13 ರಂದು ಕೊಪ್ಪ ತಾ|| ದಲಿತ ಸಂಘರ್ಷ ಸಮಿತಿ ಏರ್ಪಡಿಸಿದ್ದ ಅಂಬೇಡ್ಕರ್ ಸ್ಮರಣ ದಿನಾಚರಣೆಯಲ್ಲಿ ಡಾ|| ಅಂಬೇಡ್ಕರರ ಜೀವನ ಮತ್ತು ವಿಚಾರಧಾರೆ ಕುರಿತು ಅವರು ಮಾತಾಡಿದರು. "ಡಾ|| ಅಂಬೇಡ್ಕರ್ ದಲಿತ ನಾಯಕರೇನೋ ಹೌದು; ಅಷ್ಟೇ ಅಲ್ಲ, ಇಡೀ ದೇಶದ ನಾಯಕರೂ ಹೌದು. ಅವರನ್ನು ದಲಿತರ ನಾಯಕರು ಮಾತ್ರ ಎನ್ನುವುದಾದರೆ ಗಾಂಧಿ, ನೆಹರು' ಪಟೇಲ್ ಮುಂತಾದ ರಾಷ್ಟ್ರ ನಾಯಕರನ್ನೆಲ್ಲ ಇದೇ ರೀತಿಯಲ್ಲಿ ಆಯಾ ಜಾತಿ ನಾಯಕರಾಗಿ ಮಾತ್ರ ಗುರುತಿಸುವುದು ಸಮಂಜಸವಾಗುತ್ತದೆ" ಎಂದ ಅವರು ಅಂಬೇಡ್ಕರ್ ಹೇಗೆ ಇಡೀ ದೇಶದ ಬಗ್ಗೆ ಚಿಂತಿಸಿ ಅದಕ್ಕಾಗಿ ದುಡಿದರೆಂಬುದನ್ನು ಅವರ ಜೀವನ ಮತ್ತು ವಿಚಾರಗಳಿಂದ ಉದಾಹರಣ ಸಹಿತ ವಿವರಿಸಿದರು.

ದೇಶದ ಜನಸಂಖ್ಯೆಯ ಐದರಲ್ಲೊಂದು ಭಾಗದಷ್ಟು ಜನರಾದ ಹರಿಜನರು '5ನೇ ದರ್ಜೆ'ಯವರಾಗಿ, ಪಶುಗಳಿಗಿಂತ ಕೀಳಾಗಿ ಬದುಕುತ್ತಿದ್ದರೆ ಇಡೀ ದೇಶ ಅಖಂಡವಾಗಿ ಒಂದಾಗಿ ಬಾಳಲು ಸಾಧ್ಯವಿಲ್ಲ. ದಲಿತ ಜನಾಂಗಗಳು ಇತರರಿಗೆ ಸಮಾನವಾಗಿ ಬಾಳಲು ಸಾಧ್ಯವಾಗುವಂಥ ಪರಿಸ್ಥಿತಿ ಮೊದಲು ನಿರ್ಮಾಣವಾಗಬೇಕು. ಇಲ್ಲವಾದರೆ ಈ ದೇಶದ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂಬುದನ್ನು ಗ್ರಹಿಸಿದ ಅವರು ದಲಿತರ ಏಳಿಗೆಗಾಗಿ ತಮ್ಮ ಜೀವನವನ್ನೇ ಧಾರೆ ಎರೆದರು ಎಂದು ಪುಟ್ಟಯ್ಯ ವಿವರಿಸಿದರು.

"ನನ್ನ ವೇದಾಂತ ಪ್ರೀತಿ, ಸೋದರತೆ, ಸ್ವಾತಂತ್ರ್ಯ ಮತ್ತು ಸಮಾನತೆ. ಇದು ಪಾಶ್ಚಾತ್ಯ ವೇದಾಂತ ಅಲ್ಲ. ಈ ತತ್ವಗಳನ್ನು ನಾನು, ಈ ದೇಶದಲ್ಲಿಯೇ ಹುಟ್ಟಿ, ಈ ದೇಶದ, ಜನತೆಯ ಉದ್ಧಾರಕ್ಕಾಗಿಯೇ ದುಡಿದ ಬುದ್ಧನ ಚಿಂತನೆ, ಬೋಧನೆಗಳಿಂದ ಗ್ರಹಿಸಿದ್ದು" ಎಂದು ಅಂಬೇಡ್ಕರ್ ಹೇಳಿದ್ದಾರೆ. ಅವರ ಚಿಂತನೆಗಳು, ತತ್ವಗಳು ಎಷ್ಟು ಸಾರ್ವತ್ರಿಕ ಗುಣದವಾಗಿದ್ದವು ಎಂಬುದಕ್ಕೆ, ಅತಿ ಪ್ರಬುದ್ಧ ದೇಶವಾದ ಅಮೆರಿಕದ ಸಂವಿಧಾನದಲ್ಲಿ ಕೂಡ ಅವರ ಹಲವು ತತ್ವಗಳು ಅಳವಡಿಸಲ್ಪಟ್ಟು, 'ಮಾರ್ಗದರ್ಶಕ, ಮನಸೀಯ....' ಎಂದು ಪ್ರಶಂಸೆಗೊಂಡಿರುವುದು ಒಂದು ಉದಾಹರಣೆ ಎಂದು ಪುಟ್ಟಯ್ಯ ಹೇಳಿದರು.

ನಮ್ಮ ಸಮಾಜದಲ್ಲಿ ದುರ್ಬಲರ ಶೋಷಣೆಯ ಬಗ್ಗೆ ಮಾತನಾಡಿದ ನರಸಿಂಹರಾಜಪುರದ ನ್ಯಾಯವಾದಿ ಶ್ರೀಮತಿ ಶಶಿಕಲಾ ಅವರು, "ದಲಿತರು ಮಾತ್ರವಲ್ಲ, ಮಕ್ಕಳು, ಮುದುಕರು, ಮಹಿಳೆಯರು, ಆರ್ಥಿಕವಾಗಿ ನೆಲ ಕಚ್ಚಿದವರು ಇವರೆಲ್ಲ ದುರ್ಬಲರೇ. ಇವರ ಸಮಸ್ಯೆಗಳಿಗೆ ಸಣ್ಣಪುಟ್ಟ ಸರ್ಕಾರಿ ಕೊಡುಗೆಗಳು ಪರಿಹಾರವಲ್ಲ. ಒಂದು ಜನಾಂಗಕ್ಕೆ ಪೂರ್ತಿಯಾಗಿ ತಮ್ಮ ಕಾಲ ಮೇಲೆ ನಿಲ್ಲಬಲ್ಲ ದುಡಿಯುವ ಶಕ್ತಿ ಬರುವಂಥ ದೀರ್ಘಾವಧಿ ಯೋಜನೆಗಳು ಬೇಕು" ಎಂದರು.

ದಲಿತರಿಗೆ ಹೊಟ್ಟೆ ಮೊದಲು ತಾವೂ ಮುಂದೆ ಬರಬೇಕೆಂಬ ಆದಮ್ಯ ಹಂಬಲ ಬೇಕು, ಅವರಿಗೂ ಎಲ್ಲರಂತೆ ಆಸೆ–ಆಕಾಂಕ್ಷೆಗಳು (ಮಕ್ಕಳ ವಿದ್ಯಾಭ್ಯಾಸ, ಮನೆ, ಒಡವೆ–ವಸ್ತ್ರ ಇತ್ಯಾದಿ) ಹುಟ್ಟಬೇಕು. ಅದಕ್ಕೆ ತಕ್ಕ ಕೆಚ್ಚು, ಆತ್ಮಾಭಿಮಾನ ಮೂಡಬೇಕು. ಮುಂದೆ ಬಂದವರು ಉಳಿದ ಸವಲತ್ತುಗಳನ್ನು ಇನ್ನುಳಿದವರಿಗಾಗಿ ಬಿಟ್ಟು ಕೊಡುತ್ತಾ ಅವರನ್ನೂ ತಮ್ಮ ಮಟ್ಟಿಗೆ ಮುಂದೆ ತರಲು ಸಹಕರಿಸಬೇಕು ಎಂದು ಶಶಿಕಲಾ ಅಭಿಪ್ರಾಯ ಪಟ್ಟರು.

ಈ ದಿಕ್ಕಿನಲ್ಲಿ, "ವಿಷದ ಹೆಂಡ ಬೇಡ, ವಸತಿ ಶಾಲೆ ಬೇಕು" ಎಂಬ ದ. ಸಂ. ಸ. ದವರ ಒತ್ತಾಯ ಬಹಳ ಯೋಗ್ಯವಾದುದು. ದೂರಗಾಮಿ ಪರಿಣಾಮವುಳ್ಳಂಥದು ಎಂದು ಅವರು ಪ್ರಶಂಸಿಸಿದರು.


ದಲಿತರ ಸಂಘಟನೆಯ ಅವಶ್ಯಕತೆ ಬಗ್ಗೆ ಮಾತನಾಡಿದ ಪತ್ರಕರ್ತ ಕಲ್ಕುಳಿ ವಿಠಲ ಹೆಗ್ಡೆ, ದಲಿತ ಸಂಘ ಬರೀ ಹರಿಜನರ ಸಂಘ ಅಲ್ಲ; ಎಲ್ಲ ದುರ್ಬಲರ, ಶೋಷಿತರ, ಯಾವುದೇ ಯಜಮಾನಿಕೆಯಿಲ್ಲದ ಎಲ್ಲರ ಸಂಘ. ಜಾತಿಯ ಸೊಕ್ಕು ಇನ್ನೂ ಅಡಗಿರದವರು ಹರಿಜನರ ಜೊತೆ ಸೇರಲು ಹಿಂದೇಟು ಹಾಕುವುದರಿಂದ ಮಾತ್ರ ಇದರಲ್ಲಿ ಹೆಚ್ಚಾಗಿ ಹರಿಜನರೇ ಕಾಣುವಂತಾಗಿದೆ ಆದರೆ ಈಗ ಎಲ್ಲಾ ಕಡೆಗಳಲ್ಲೂ ಬೇರೆಲ್ಲ ಶೋಷಿತರೂ ಇದರಲ್ಲಿ ಹೆಚ್ಚೆಚ್ಚು ಸೇರುತ್ತಿದ್ದಾರೆ ಎಂದು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶೃಂಗೇರಿ ತಾ|| ದ. ಸಂ. ಸ. ಸಂಚಾಲಕ ಕೆ.ಎಂ. ಗೋಪಾಲ್ ಮಾತನಾಡಿ, ದಲಿತ ಸಂಘರ್ಷ ಸಮಿತಿ ಮಾನವೀಯತೆಗೆ ಒತ್ತು ಕೊಡುವ ಸಂಘಟನೆ. ಇದಕ್ಕೆ ನಿರ್ದಿಷ್ಟವಾದ ಗೊತ್ತು–ಗುರಿಗಳಿವೆ. [illegible] ಗಳಿಂದ ಪಕ್ಷ, ಸಂಘಟನೆ [illegible] ಕಲ್ಪನವರಿಗೆ ಅವೆಲ್ಲವನ್ನೂ ಕೊಡುವ ಕೆಲಸ ಮಾಡುತ್ತಿರುವ ದ ಸಂ ಸ ದ [illegible] ಜಗಾಧಕಾರದು ಎಂದು ಹೇಳಿ, [illegible] ಸಮಾಜದಲ್ಲಿ ದಲಿತರ ಬಗ್ಗೆ [illegible] ದಲಿತ ಸಂಘಟನೆ [illegible] ಇದೆ ಎಂದು ಅಭಿಪ್ರಾಯಿಸಿದರು.

ಕೊಪ್ಪ ತಾ|| ದ. ಸಂ. ಸ. [illegible] ವಿ.ಎಲ್. ಮಂಜಪ್ಪ [illegible] ಶಿವಣ್ಣ ಮಾತನಾಡಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್,

ಅಚ್ಚು : ದೀಪಟಿಗೆ ಅಚ್ಚು ಕೂಟ, ಕೊಪ್ಪ.



ರಾಷ್ಟ್ರಪ್ರಶಸ್ತಿ ವಿಜೇತ ಸಮಾಜ ಸೇವಕಿ, ದಣಿವರಿಯದ ಗಾಂಧೀ ಮಾರ್ಗಿ,

ಶ್ರೀಮತಿ ಸಾವಿತ್ರಮ್ಮ ರಾಮಶರ್ಮ

ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಬಹಳ ಪ್ರಜ್ಞಾವಂತರಾದ ತೀರ್ಥಹಳ್ಳಿ ತಾ॥ನಲ್ಲಿ ಬಸವಾನಿ ಎಂಬ ಪುಟ್ಟ ಹಳ್ಳಿ ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಖ್ಯಾತಿ ಗಳಿಸಿದೆ. ಇದಕ್ಕೆ, 1918 ರಷ್ಟು ಹಿಂದಿನಿಂದಲೂ ಇಲ್ಲಿ ರಾಷ್ಟ್ರೀಯ ಕಾಂಗ್ರೆಸನ್ನು ಮತ್ತು ಆ ಮೂಲಕ ರಾಷ್ಟ್ರೀಯ ಚಳುವಳಿಯನ್ನು ಬೆಳೆಸಿದ, ಅನಂತರ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದ ತ್ಯಾಗವೀರ ಅಂಡೇಕುಳಿ ಮಂಜಯ್ಯನವರ ಹಾಗೂ ಅನಂತರ ಅವರ ಶಿಷ್ಯ ಬಸವಾನಿ ರಾಮಶರ್ಮರವರ ಚಳುವಳಿ ಚಟುವಟಿಕೆಗಳು ಒಂದು ಕಾರಣವಾದರೆ, ಸುಮಾರು 1941-42ರ ಸುಮಾರಿನಿಂದ ಇಲ್ಲಿ ಮಹಿಳೆಯರ- ಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಎಡೆಬಿಡದೆ ನೆರವೇರಿಸಿಕೊಂಡು ಬರುತ್ತಿರುವ ಶ್ರೀಮತಿ ಸಾವಿತ್ರಮ್ಮ ರಾಮಶರ್ಮ ಅವರ ಚಟುವಟಿಕೆ- ಖ್ಯಾತಿಗೂ ಒಂದು ಮುಖ್ಯ ಕಾರಣ.

ಶ್ರೀಮತಿ ಸಾವಿತ್ರಮ್ಮನವರ ಈ ಸೇವಾ ಚಟುವಟಿಕೆಗಳ ಫಲವಾಗಿ ಅವರಿಗೆ 'ಶಿಶು ಕಲ್ಯಾಣ'ದ ಬಗೆಗಿನ 1987ರ ರಾಷ್ಟ್ರ ಪ್ರಶಸ್ತಿ ಲಭಿಸಿದೆ. ನಿಃಸ್ವಾರ್ಥ ಸಮಾಜ ಸೇವೆ ಎಂದೊಡನೆ 'ಅಯ್ಯೋ, ಅದೆಲ್ಲಿ ಸಾಧ್ಯ ?'... ಎಂಬಂಥ ಪ್ರತಿಕ್ರಿಯೆಯನ್ನು ಕೇಳುವಂತಾಗಿರುವ ಇಂದಿನ ಪರಿಸ್ಥಿತಿಯಲ್ಲೂ ಅಂಥದೊಂದು ಕಾಯಕವನ್ನು ಮುಂದುವರಿಸಿಕೊಂಡು ಬರುತ್ತಿರುವ ಈ ಹಿರಿಯ ಜೀವ ಶ್ರೀಮತಿ ಸಾವಿತ್ರಮ್ಮನವರನ್ನೂ, ಅವರ ಈ ಕಾಯಕಕ್ಕೆ ಪ್ರೇರಣೆ ಮತ್ತು ಬೆಂಬಲವಾಗಿ ನಿಂತ ಶ್ರೀ ರಾಮಶರ್ಮರನ್ನೂ, ಅವರು ನಡೆಸಿದ ಮತ್ತು ಅದೇ ತಳಹದಿಯಿಂದ ಇಂದಿಗೂ ಮುಂದುವರಿದುಕೊಂಡು ಹೋಗುತ್ತಿರುವ ಸಾಮಾಜಿಕ ಸೇವಾ ಚಟುವಟಿಕೆಗಳನ್ನೂ ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಿದ್ದೇವೆ.

ಸಂದರ್ಶನ: ಸಿರಿಮನೆ ನಾಗರಾಜ್

ತರೀಕೆರೆ ತಾ॥ ಲಿಂಗದಹಳ್ಳಿಯ ಮಾಜಿ ಶ್ಯಾನುಭೋಗರ ಮಗಳಾದ ಸಾವಿತ್ರಮ್ಮ ಸುಮಾರು 12–13 ನೇ ವಯಸ್ಸಿನಲ್ಲೇ ಮದುವೆಯಾಗಿ ಬಸವಾನಿಗೆ ಗಂಡನ ಮನೆಗೆ ಬರುವಾಗ– 1930ರ ಸರಿಸುಮಾರಿಗೆ– ದೇಶಾದ್ಯಂತ ಸ್ವಾತಂತ್ರ್ಯ ಚಳುವಳಿಯ ಜ್ವಾಲೆ ಧಗಧಗಿಸುತ್ತಿತ್ತಾದರೂ ಇವರಿಗೆ ಅದರ ಪರಿವೆ ಅಷ್ಟಾಗಿ ಏನೂ ಇರಲಿಲ್ಲ.

ಗಾಂಧೀ ಕಾರ್ಯಕ್ರಮಗಳ ಸೆಳೆತ

ಆದರೆ ಅದಾಗಲೇ ಅದೇ ಊರಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಅಂಡೇಕುಳಿ ಮಂಜಯ್ಯನವರ ಗರಡಿಯಲ್ಲಿ ಪಳಗಿದ್ದ ಇವರ ಪತಿ ಶ್ರೀ ರಾಮಶರ್ಮರ ಓಡಾಟ, ಕಾರ್ಯ ಚಟುವಟಿಕೆಗಳಿಂದಾಗಿ ಇವರಿಗೂ ಸ್ವಾತಂತ್ರ್ಯ ಚಳುವಳಿಯ ಪರಿಚಯವಾಗತೊಡಗಿತು. ಅದರ ಜೊತೆಗೇ ಗಾಂಧೀಜಿಯವರ ತತ್ವ–ವಿಚಾರ–ರಚನಾತ್ಮಕ ಕಾರ್ಯಕ್ರಮಗಳ ಪರಿಚಯ ಕೂಡ ಆಗಿ ಅವು ಇವರನ್ನು ಹೆಚ್ಚೆಚ್ಚು ಸೆಳೆಯತೊಡಗಿದವು.

ಹೀಗಾಗಿ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಶಿಕ್ಷಣ ಕೇಂದ್ರದ ತರಬೇತಿ ಶಿಬಿರಗಳಲ್ಲಿ ಮೊದಲಿಗೆ ಶಿಬಿರಾರ್ಥಿಯಾಗಿ, ಕ್ರಮೇಣ ಶಿಕ್ಷಕಿ, ಮೇಲ್ವಿಚಾರಕಿ ಆಗಿ ಭಾಗವಹಿಸುತ್ತಾ, ಗಾಂಧೀ ತತ್ವ–ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತರಬೇತಿಯೂ ದೊರೆಯಿತು. ಅದರ ಜೊತೆಗೇ ಆರೋಗ್ಯ ಪರಿಚಾರಿಕೆ (ಸೂಲಗಿತ್ತಿಯ ಕೆಲಸ), ಆಯುರ್ವೇದ ಚಿಕಿತ್ಸೆ, ಬಾಲವಾಡಿ ಶಿಕ್ಷಣ– ಇವುಗಳ ತರಬೇತಿ ಕೂಡ

ಮಹಿಳೆ–ಮಕ್ಕಳ ಕಾರ್ಪಣ್ಯ

1942ರ 'ಕ್ವಿಟ್ ಇಂಡಿಯ' ಚಳುವಳಿಯ ಹೊತ್ತಿಗೆ ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯವಾಗಿ ಹಳ್ಳಿ ಹಳ್ಳಿಗಳಲ್ಲಿ ಓಡಾಡಿ ಸಾಕಷ್ಟು ಸಂಘಟನಾ ಅನುಭವ ಗಳಿಸುವುದರ ಜೊತೆಗೆ ಹಳ್ಳಿಗರ, ಮುಖ್ಯವಾಗಿ ಮಹಿಳೆಯರ ಮತ್ತು ಮಕ್ಕಳ ಕಷ್ಟ–ಕಾರ್ಪಣ್ಯಗಳ ವಿಶ್ವರೂಪ ದರ್ಶನ ಸಾವಿತ್ರಮ್ಮನವರಿಗೆ ಆಗತೊಡಗಿದಂತೆ, ಇಡೀ ಪಕ್ಷ ಬಸುರಿ–ಬಾಣಂತಿಯರಿಗೆ ಹಾಗೂ ಅನಾಥ ಮಕ್ಕಳಿಗಾದರೂ ತಾನು ಏನಾದರೂ ಸೇವಾ ಕಾರ್ಯ ಆರಂಭಿಸಲೇಬೇಕೆಂಬ ಬಯಕೆ ಒತ್ತಡವಾಗತೊಡಗಿತು.

ಗ್ರಾಮ ಸೇವಾ ಕೇಂದ್ರ

ಇದರ ಪರಿಣಾಮವಾಗಿ, 1947 ರಲ್ಲಿ ರೂಪು ತಳೆದದ್ದು 'ಕಸ್ತೂರಬಾ ಗ್ರಾಮ ಸೇವಾ ಕೇಂದ್ರ'. ಇದಕ್ಕೆ ಮಾರ್ಗದರ್ಶನ ಅರಸೀಕೆರೆಯಲ್ಲಿದ್ದ 'ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ' ಸಂಸ್ಥೆಯದು. ಸುತ್ತ ಮುತ್ತಲ ಊರುಗಳ ಅನಾಥ ಹೆಣ್ಣು–ಗಂಡು ಮಕ್ಕಳಿಗೆ ಅನಾಥಾಲಯ, ಬಾಲವಾಡಿಯಾಗಿತ್ತು. ಆ ಮಕ್ಕಳನ್ನು ಹದಿನೇಳು ವರ್ಷ ಪ್ರಾಯದವರೆಗೆ ಸಾಕಿ ಬೆಂಗಳೂರು ಬಳಿಯ ವಿಭೂತಿಪುರ, ಅನಾಥ ಸೇವಾಶ್ರಮ, ಮೈಸೂರಿನ ಕನ್ಯಾ ವಿದ್ಯಾಲಯ ಮುಂತಾದೆಡೆಗಳಿಗೆ ಕಳಿಸುತ್ತಿದ್ದರು.

(ಹೀಗೆ ಈ ಕೇಂದ್ರದಿಂದ ಮೈಸೂರಿಗೆ ಕಳಿಸಲಾಗಿದ್ದ ಸರೋಜ ಎಂಬ ಬಡ ಹುಡುಗಿಯನ್ನು ಮುಂದೆ ಶ್ರೀಮತಿ ಯಶೋಧರಮ್ಮ ಮತ್ತು ಶ್ರೀ ದಾಸಪ್ಪನವರ ಮಗ ಎಚ್. ಡಿ. ತುಳಸೀದಾಸ್ ಮದುವೆಯಾದರು. ಯಶೋಧರಮ್ಮ ಅರಸೀಕೆರೆಯ ಕಸ್ತೂರಬಾ ಗಾ.ಸ್ಮಾ. ನಿಧಿಯ ಏಜೆಂಟ್ (ಸಂಚಾಲಕಿ) ಯಾಗಿದ್ದರು)

ಮಾತೃಮಂದಿರ

ಮುಂದೆ 1954 ರಲ್ಲಿ, ಮೇಲ್ಕಂಡ ನಿಧಿಯ ಆಶ್ರಯದಲ್ಲಿ ಬಸವಾನಿಯಲ್ಲಿ 'ಕಸ್ತೂರಬಾ ಮಾತೃ ಮಂದಿರ' ತಲೆಯೆತ್ತಿತು. ಸಾವಿತ್ರಮ್ಮ ಇದರ ಸ್ಥಾಪಕ ಸಂಚಾಲಕಿ. ಇದೊಂದು ಹೆರಿಗೆ ಆಸ್ಪತ್ರೆ. ಒಬ್ಬರು ಮಿಡ್‌ವೈಫ್, ಆಯಾ, ಅಡಿಗೆಯವರು– ಇದಿಷ್ಟು ಸಿಬ್ಬಂದಿ. ಸಾವಿತ್ರಮ್ಮನೇ ಮೇಲ್ವಿಚಾರಕಿ, 'ವೈದ್ಯೆ' ಎಲ್ಲ.

ಇಲ್ಲಿ ಗರ್ಭಿಣಿಯರಿಗೆ, ಬಾಣಂತಿಯರಿಗೆ, ಮಕ್ಕಳಿಗೆ ಅಗತ್ಯವಾದ ಊಟ–ವಸತಿ, ಔಷಧೋಪಚಾರ ಎಲ್ಲವನ್ನು ಉಚಿತವಾಗಿ ನೀಡಲಾಗುತ್ತಿದೆ. ಪ್ರಯೋಜನದಾರರಿಂದ ಕನಿಷ್ಠ ಪ್ರಮಾಣದ ಶುಲ್ಕವನ್ನು– ಕೊಡಲು ಸಾಧ್ಯವಿರುವವರಿಂದ— ಪಡೆಯಲಾಗುತ್ತದೆ. ಕೆಲವೊಮ್ಮೆ ಗರ್ಭಿಣಿಯರನ್ನು ಕಾರು ಮಾಡಿ ತೀರ್ಥಹಳ್ಳಿ ಆಸ್ಪತ್ರೆಗೆ ಕರೆದೊಯ್ಯಬೇಕಾಗುತ್ತಿತ್ತು.

ಈ ಮಂದಿರದ ಸಿಬ್ಬಂದಿಯ ಸಂಬಳವನ್ನು ಮಾತ್ರ ಸ್ಮಾರಕ ನಿಧಿ ಭರಿಸುತ್ತಿತ್ತು. ಉಳಿದೆಲ್ಲ ಖರ್ಚು ವೆಚ್ಚಗಳಿಗಾಗಿ ಸುತ್ತ ಮುತ್ತಲ ಜನತೆಯಿಂದ ವಂತಿಗೆ ಸಂಗ್ರಹಿಸಬೇಕಿತ್ತು. ಈ ಕಾರಣಕ್ಕಾಗಿ ಬೇಸಿಗೆಯಲ್ಲಿ ಸುತ್ತ ಮುತ್ತಲ ಕೊಪ್ಪ, ಶೃಂಗೇರಿ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಸಂಚರಿಸಿ ಅಕ್ಕಿ, ಭತ್ತ, ಅಡಿಕೆ ಮುಂತಾದ ರೂಪದಲ್ಲಿ ವಂತಿಗೆ ಸಂಗ್ರಹಿಸುತ್ತಿದ್ದರು.

ಜೈಲು ; ಬಂಧುಗಳ ಬಹಿಷ್ಕಾರ

ಸಾವಿತ್ರಮ್ಮನವರು 1947ರ "ಮೈಸೂರು ಚಲೋ" ಸತ್ಯಾಗ್ರಹದಲ್ಲಿ ಭಾಗವಹಿಸಿ, ತೀರ್ಥಹಳ್ಳಿ ತಾ॥ ಕಚೇರಿ ಪಿಕೆಟಿಂಗ್ ಮಾಡಿ ಜೈಲು ವಾಸವನ್ನೂ ಕಂಡವರು.

(3ನೇ ಪುಟಕ್ಕೆ)

ಶ್ರೀ ರಾಮಶರ್ಮ



ತಮ್ಮ ಪತ್ನಿ ಶ್ರೀಮತಿ ಸಾವಿತ್ರಮ್ಮನವರ ಸೇವಾ ಮನೋಭಾವಕ್ಕೆ ಸತತವಾಗಿ ಪ್ರೋತ್ಸಾಹದ ನೀರೆರೆದು (ಹಾಲೆರೆದು), ಅವರ ಎಲ್ಲಾ ಸೇವಾಕಾರ್ಯಗಳಿಗೆ ದೃಢವಾದ ಬೆನ್ನೆಲುಬಾಗಿ ನಿಂತ ರಾಮಶರ್ಮರು ಸುಮಾರು ತಮ್ಮ 12 ನೇ ವರ್ಷದಿಂದಲೇ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೆ ಸಿಕ್ಕಿದವರು. ಸಂಸ್ಕೃತ ಮತ್ತು ವೇದ ಶಾಸ್ತ್ರಗಳಲ್ಲಿ ಪಾರಂಗತರಾಗಿ ಹಲವಾರು ಕಡೆಗಳಲ್ಲಿ ನಾಲ್ಕೂ ವೇದಗಳ ಬಗ್ಗೆ ನೂರಾರು ಉಪನ್ಯಾಸಗಳನ್ನು ನೀಡಿ ಖ್ಯಾತಿ ಗಳಿಸಿದ್ದ ಶರ್ಮರು ತಮ್ಮ 20 ನೇ ವಯಸ್ಸಿನಲ್ಲಿ ಸ್ವಾತಂತ್ರ್ಯ ಚಳುವಳಿಗೆ ಪೂರ್ಣವಾಗಿ ಧುಮುಕಿದರು. 1929–31ರಲ್ಲಿ ಇವರ 'ಗುರು' ಶ್ರೀ ಅಂಡೇಕುಳಿ ಮಂಜಯ್ಯನವರು ಅಂಕೋಲೆಯ ಅರಣ್ಯ ಸತ್ಯಾಗ್ರಹ ಕಾರಣ ಜೈಲಲ್ಲಿದ್ದರು. ಆ ಕಾಲದಲ್ಲಿ, ಊರಿನಲ್ಲಿ ಅವರ ಚಟುವಟಿಕೆಗಳನ್ನು ಮುಂದುವರಿಸ ತೊಡಗಿದ ರಾಮಶರ್ಮರು ಮತ್ತೆ ಹಿಂದಡಿ ಇಡಲಿಲ್ಲ.

1946ರಲ್ಲಿ ಮಲೆನಾಡು ಗೇಣಿದಾರರ ಸಂಘ ರಚನೆಯಾದಾಗ ಇವರು ಅದರ ಸ್ಥಾಪಕ ಪ್ರಧಾನ ಕಾರ್ಯದರ್ಶಿಯಾದರು. ಈ ಸಂಘವೇ ಪ್ರಖ್ಯಾತ ಕಾಗೋಡು ಸತ್ಯಾಗ್ರಹವನ್ನು ಆರಂಭಿಸಿತ್ತು. ಅದರಲ್ಲಿ ಇವರು ಬಂಧನಕ್ಕೂ ಒಳಗಾದರು. ("ಆದರೆ ಕಾರಣಾಂತರದಿಂದ ನಮ್ಮ ಸಂಘದಿಂದ ಚಳುವಳಿ ಮುಂದುವರಿಯಲಿಲ್ಲ. ಆಗ ಸಮಾಜ

(3ನೇ ಪುಟಕ್ಕೆ)

ಶ್ರೀಮತಿ ಪದ್ಮಾ ರಾಮದಾಸ್ ಸ್ಮಾರಕ ಸಂಸ್ಥೆ

ರಾಮಶರ್ಮರವರ ಗುರು ಅಂಡೆಕುಳಿ ಮಂಜಯ್ಯನವರ ಮಗ ರಾಮದಾಸ್ ತಮ್ಮ ತಂದೆಯಿಂದ ಬಳುವಳಿಯಾಗಿ ಬಂದ ಸಾಮಾಜಿಕ ಪ್ರಜ್ಞೆಯ ಜೊತೆಗೆ ಶ್ರೀಮತಿ ಸಾವಿತ್ರಮ್ಮ ಮತ್ತು ರಾಮಶರ್ಮರ ಚೈತನ್ಯಶೀಲ ಸಾಮಾಜಿಕ ಚಟುವಟಿಕೆಗಳ ಕುಲುಮೆಯಲ್ಲಿ ಹದವಾದವರು. ಉಪಾಧ್ಯಾಯರಾಗಿ ದುಡಿದು ನಿವೃತ್ತರಾಗಿರುವವರು.

ಇವರ ಪತ್ನಿ ದಿ॥ ಪದ್ಮಾ ಅವರು ಆರಂಭದಿಂದಲೂ ಒಬ್ಬ ಉತ್ತಮ ಸಾಮಾಜಿಕ ಕಾರ್ಯಕರ್ತೆಯಾಗಿ ರಾಮಶರ್ಮ ದಂಪತಿಗಳ ಸೇವಾ ಚಟುವಟಿಕೆಗಳಿಗೆ ಹೆಗಲು ಕೊಟ್ಟು ದುಡಿದರು. ಬಸವಾನಿ ಮಹಿಳಾ ಸಮಾಜಕ್ಕೆ ಸುಮಾರು 25 ವರ್ಷ ಕಾರ್ಯದರ್ಶಿಯಾಗಿದ್ದ ಇವರು ಶಿವಮೊಗ್ಗ ಜಿಲ್ಲಾ ಸಮಾಜ ಕಲ್ಯಾಣ ಮಂಡಳಿಯ ಸದಸ್ಯೆಯೂ ಆಗಿದ್ದರು.

ಅವರ ಅಕಾಲಿಕ ನಿಧನದ ನಂತರ ರಾಮದಾಸ್ ಕುಟುಂಬದವರು ಸ್ಥಳೀಯ ಹಿತೈಷಿಗಳನ್ನೂ ತಮ್ಮ ಕುಟುಂಬದ ಬಂಧುಗಳನ್ನೂ ಒಳಸಿಕೊಂಡು "ಶ್ರೀಮತಿ ಪದ್ಮಾ ರಾಮದಾಸ್ ಸ್ಮಾರಕ ಸಂಸ್ಥೆ" ಎಂಬ ಟ್ರಸ್ಟನ್ನು ಸ್ಥಾಪಿಸಿ, ಇಲ್ಲಿನ ಎಲ್ಲಾ ಸೇವಾ ಚಟುವಟಿಕೆಗಳನ್ನು ಅದರ ಮೂಲಕ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಹಿಂದಿನಿಂದಲೂ ರಾಮಶರ್ಮ ದಂಪತಿಗಳ ಕಾರ್ಯಕ್ರಮಗಳಲ್ಲಿ ಹೆಗಲು ಕೊಟ್ಟವರಾದ ಹಲವು ಜನರು ಈ ಟ್ರಸ್ಟಿಗೆ ಬೆಂಬಲವಾಗಿ ದುಡಿಯುತ್ತಿದ್ದಾರೆ.

(3ನೇ ಪುಟಕ್ಕೆ)

ಓದುಗರ ಪತ್ರ

ಕೊಪ್ಪ ರಸ್ತೆಗೆ ಫುಟ್‌ಪಾತ್ ನಿರ್ಮಾಣ ಮತ್ತು ಸಂಚಾರ ನಿಯಂತ್ರಣಕ್ಕೆ ಮನವಿ

ಮಾನ್ಯರೆ,

ತಾಲ್ಲೂಕು ಕೇಂದ್ರವಾದ ಕೊಪ್ಪ ಟೌನ್ ಕೆಳಪೇಟೆಯ ಮುಖ್ಯ ರಸ್ತೆಯ ಕೆಲವು ಭಾಗಗಳಲ್ಲಿ ರಸ್ತೆ ತೀರಾ ಇಕ್ಕಟ್ಟಾಗಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಊರಿನಲ್ಲಿ ವಾಹನಗಳ ಸಂಖ್ಯೆ ಗಣನೀಯವಾಗಿ ಏರುತ್ತಿದ್ದು, ಕೆಲವೊಮ್ಮೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳನ್ನು ದೀರ್ಘಕಾಲ ನಿಲ್ಲಿಸುವುದರಿಂದ ಶಾಲಾ ಮಕ್ಕಳು, ವೃದ್ಧರು, ಮತ್ತಿತರರು ಓಡಾಡಲು ಹಾಗೂ ಬೇರೆ ವಾಹನಗಳು ತಿರುಗಾಡುವುದಕ್ಕೆ ತುಂಬಾ ತೊಂದರೆಯಾಗುತ್ತಿದೆ.

ಆದ್ದರಿಂದ ಪೇಟೆಯ ಮಧ್ಯದಲ್ಲಿರುವ ಅರಳಿಕಟ್ಟೆ ಸಮೀಪದಿಂದ ಬಸ್ ನಿಲ್ದಾಣದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಫುಟ್‌ಪಾತ್ ನಿರ್ಮಿಸಿ, ಮತ್ತು ರಸ್ತೆಯಲ್ಲಿ ವಾಹನಗಳ ದೀರ್ಘಕಾಲದ ನಿಲುಗಡೆಯನ್ನು ನಿಷೇಧಿಸಿ, ವಾಹನಗಳ ಅಪಘಾತ ಮತ್ತು ಪಾದಚಾರಿಗಳಿಗಾಗುತ್ತಿರುವ ತೊಂದರೆಗಳನ್ನು ಪರಿಹರಿಸಲು ಪುರಸಭೆ ಯವರು ಅಗತ್ಯ ಕ್ರಮ ತೆಗೆದುಕೊಳ್ಳಬೇಕಾಗಿ ಕೋರುತ್ತೇವೆ.

ನಾಗರಿಕರು, ಕೊಪ್ಪ.
(25 ಜನರ ಸಹಿಗಳಿವೆ)

(ಈ ಮನವಿಯನ್ನು ಪುರಸಭೆಗೆ ಸಲ್ಲಿಸಿದ್ದು, ಇದರ ನಕಲನ್ನು ಕೊಪ್ಪದ [illegible]ಸ್ ಸಬ್ ಇನ್ಸ್‌ಪೆಕ್ಟರ್‌ರವರಿಗೆ ಸಲ್ಲಿ[illegible] ವಿಚಾರದಲ್ಲಿ ಸೂಕ್ತ ಕ್ರಮಕ್ಕಾಗಿ ವಿನಂತಿಸಲಾಗಿದೆ.)

ತಜ್ಞರ ವರದಿ ಬರುವವರೆಗೆ ಭದ್ರಾ ಮೇಲ್ದಂಡೆ ಯೋಜನೆ ಇಲ್ಲ

ಭದ್ರಾ ಮೇಲ್ದಂಡೆ ಯೋಜನೆಯಿಂದ ಆಗುವ ದುಷ್ಪರಿಣಾಮಗಳನ್ನು ಅಧ್ಯಯನ ಮಾಡಿ ತಜ್ಞರ ವರದಿ ಪಡೆಯುವವರೆಗೆ ಭದ್ರಾ ಮೇಲ್ದಂಡೆ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳುವುದಿಲ್ಲವೆಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಭದ್ರಾ ಮೇಲ್ದಂಡೆ ವಿರೋಧಿ ಸಮಿತಿಯ ನಿಯೋಗಕ್ಕೆ ಭರವಸೆ ನೀಡಿದ್ದಾರೆ

ಡಿ. 10ರಂದು ಚಿಕ್ಕಮಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಅಪಾರ ನೈಸರ್ಗಿಕ ಸಂಪತ್ತನ್ನು ನಾಶ ಮಾಡಿ ಪರಿಸರದ ಮೇಲೆ ತೀವ್ರ ದುಷ್ಪರಿಣಾಮವನ್ನು ಉಂಟು ಮಾಡುವ ಈ ಯೋಜನೆಯನ್ನು ಕೈಬಿಡುವಂತೆ ಮುಖ್ಯಮಂತ್ರಿಗಳನ್ನು ಈ ನಿಯೋಗ ಒತ್ತಾಯಿಸಿತ್ತು.

ರಾಷ್ಟ್ರ ಪ್ರಶಸ್ತಿ ವಿಜೇತ ಸಮಾಜ ಸೇವಕಿ ಸಾವಿತ್ರಮ್ಮ

(2ನೇ ಪುಟದಿಂದ)

ಹೀಗೆ ಜೈಲುವಾಸ, ಶಿಬಿರಗಳಲ್ಲಿ 'ಹೊಲೆ ಹನ್ನೊಂದು ಜಾತಿಗಳ' ಜೊತೆ ಒಡನಾಟ– ಇವುಗಳಿಗಾಗಿ ಬಂಧುಗಳಿಂದ, ಸ್ವತಃ ತಂದೆ–ತಾಯಿಗಳಿಂದಲೇ ಬಹಿಷ್ಕಾರ ಕ್ಕೊಳಗಾಗಿದ್ದವರು ಈ ದಂಪತಿಗಳು. ತೌರಿಗೆ ಹೋದರೆ ಮನೆಯೊಳಗೆ ಸೇರಿಸದೆ ಹೊರಗೆ ಕೂರಿಸಿ ಊಟಕ್ಕಿಡುತ್ತಿದ್ದುದನ್ನು ಸಾವಿತ್ರಮ್ಮ ಈಗ ಸ್ವಲ್ಪ ನೋವಿನ ಭಾವನೆಯೊಂದಿಗೆ ನೆನೆಯುತ್ತಾರೆ.

ಬೇಸಿಗೆಯಲ್ಲಿ ಹಳ್ಳಿ ಹಳ್ಳಿ ತಿರುಗಿ ಖಾದಿ, ಮದ್ಯಪಾನ ನಿಷೇಧ, ವಯಸ್ಕರ ಶಿಕ್ಷಣ, ಕುಟುಂಬಯೋಜನೆ ಮುಂತಾಗಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಪ್ರಚಾರವನ್ನು ನಡೆಸಿದವರು ಸಾವಿತ್ರಮ್ಮ.

ನಿರಾಶ್ರಿತ ಮಕ್ಕಳಿಗೆ ಆಶ್ರಯ

ಮಕ್ಕಳಿಲ್ಲದ ಈ ದಂಪತಿಗಳು, ಅತೀ ಬಡವರ ಮನೆಯ ಅಥವಾ ನಿರಾಶ್ರಿತರಾದ ಏಳೆಂಟು ಮಕ್ಕಳನ್ನು ತಮ್ಮ ಮನೆಯಲ್ಲೇ ಸಾಕುತ್ತಿದ್ದರು. ಇದಕ್ಕಾಗಿ ನಿರಾಶ್ರಿತ ಮಹಿಳೆಯರನ್ನು ನೆರವಿಗೆಂದು ಮನೆಯಲ್ಲಿರಿಸಿಕೊಂಡು ಅವರ ಜೀವನಕ್ಕೆ ಒಂದು ಆಧಾರವಾಗುತ್ತಿದ್ದರು. ಅಲ್ಲದೆ ಸಮಾಜ ಕಲ್ಯಾಣ ಮಂಡಳಿ ನೆರವಿನಿಂದ ಇವರು ಸ್ಥಾಪಿಸಿರುವ 25 ಮಕ್ಕಳಿಗೆ ಅವಕಾಶವಿರುವ ಅನಾಥಾಲಯ, ಕೂಲಿಕಾರರ ಮಕ್ಕಳಿಗಾಗಿ ಬಸವಾನಿ ಮತ್ತು ಸಮೀಪದ ಕೊಳಾವರದಲ್ಲಿ ಸ್ಥಾಪಿಸಿರುವ 'ಬಾಲಕ್ಷೇಮ ಮಂದಿರ' (ಬೇಬಿ-ಸಿಟ್ಟಿಂಗ್)ಗಳು ಈಗಲೂ ಕಾರ್ಯ ನಿರ್ವಹಿಸುತ್ತಿವೆ. ಅಲ್ಲಿನ ವಾರ್ಡನ್‌ಗಳ ಸಂಬಳ ಮಾತ್ರ ಮಂಡಳಿಯದು.

ಮಹಿಳಾ ಸಮಾಜ ಸ್ಥಾಪನೆ

ಮುಂದೆ ಬಸವಾನಿ ಮಹಿಳಾ ಸಮಾಜದ ಸ್ಥಾಪಕ ಅಧ್ಯಕ್ಷೆಯಾಗಿ ದುಡಿದ ಸಾವಿತ್ರಮ್ಮ, ಆ ಸಮಾಜದ ಮೂಲಕವೂ ತಮ್ಮ ಸೇವಾ ಚಟುವಟಿಕೆಗಳನ್ನು ವಿಸ್ತರಿಸಿದರು. ಬಡ ಹೆಣ್ಣು ಮಕ್ಕಳಿಗಾಗಿ, ಉಚಿತ ಊಟ–ವಸತಿಯೊಂದಿಗೆ ಎಸ್ಸೆಸ್ಸೆಲ್ಸಿ ಕಂಡೆನ್ಸ್‌ಡ್ ಕೋರ್ಸನ್ನು (ಎರಡೇ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಮುಗಿಸುವುದು), ಟೈಪಿಂಗ್, ಹೊಲಿಗೆ ಮುಂತಾದ ತರಬೇತಿಗಳನ್ನು ಸಮಾಜ ಕಲ್ಯಾಣ ಮಂಡಳಿ ನೆರವಿನಿಂದ ಏರ್ಪಡಿಸಿದರು. ಈಗ ಈ ಎಲ್ಲಾ ಸೇವಾ ಚಟುವಟಿಕೆಗಳನ್ನೂ, ಸಾವಿತ್ರಮ್ಮ ಮತ್ತು ರಾಮಶರ್ಮರ ಗರಡಿಯಲ್ಲಿ ಪಳಗಿರುವ ನಾಲ್ಕೈದು ಜನರು ಸೇರಿ ಶ್ರೀಮತಿ ಪದ್ಮಾ ರಾಮದಾಸ್ ಸ್ಮಾರಕ ಸಂಸ್ಥೆಯ ಮೂಲಕ ನಡೆಸುತ್ತಿದ್ದಾರೆ.

ಮಹಿಳಾ ಒಕ್ಕೂಟ

ಸಾವಿತ್ರಮ್ಮನವರು ತೀರ್ಥಹಳ್ಳಿ ತಾಲ್ಲೂಕು ಮಹಿಳಾ ಒಕ್ಕೂಟದ ಅಧ್ಯಕ್ಷೆಯಾಗಿಯೂ ಹಲವಾರು ಕಾರ್ಯಕ್ರಮಗಳನ್ನು ನಡೆಸಿದರು. ತೀರ್ಥಹಳ್ಳಿಯಲ್ಲೂ ಎಸ್ಸೆಸ್ಸೆಲ್ಸಿ ಸಂಕ್ಷಿಪ್ತ ಕೋರ್ಸ್, ಬಾಲಕ್ಷೇಮ ಮಂದಿರಗಳು, ಮಹಿಳೆಯರಿಗಾಗಿ ಆಯಾ ಮಹಿಳಾ ಸಮಾಜಗಳಲ್ಲಿ ವಿವಿಧ ಇಲಾಖಾ ಅಧಿಕಾರಿಗಳ ಮೂಲಕ ಮಾಹಿತಿ ಶಿಬಿರಗಳು ಮುಂತಾದ ಅನೇಕ ಕಾರ್ಯಕ್ರಮಗಳನ್ನು ಒಕ್ಕೂಟ ಈ ಅವಧಿಯಲ್ಲಿ ನಡೆಸಿತು

ಚೈತನ್ಯಕ್ಕೆ ಮುಪ್ಪಿಲ್ಲ

ಒಂದು ಇಡೀ ಬದುಕನ್ನು ಪರರ ಸೇವೆಯಲ್ಲಿಯೇ ಕಳೆದು ಇದೀಗ 69ರ ಪ್ರಾಯದಲ್ಲಿ, ಬೆನ್ನು ಬಗ್ಗಿ ಹೋಗಿದ್ದು, ಹೆಜ್ಜೆ ನಡೆದಾಡದ ಸ್ಥಿತಿಯಲ್ಲಿದ್ದರೂ ಅವರ ಸೇವಾ ಚೈತನ್ಯಕ್ಕೆ ಮುಪ್ಪು ಬಂದಿಲ್ಲ. ತಂದೆ–ತಾಯಿಗಳಿದ್ದೂ ತೀರಾ ನಿರ್ಗತಿಕರಾಗಿರುವ ಮಕ್ಕಳಿಗಾಗಿ ಒಂದು ಆಶ್ರಯಧಾಮವನ್ನು, ಅಂಥದೇ ವಯಸ್ಕ ಹೆಣ್ಣು ಮಕ್ಕಳಿಗಾಗಿ ಒಂದು ಆಶ್ರಯಧಾಮವನ್ನೂ ಸ್ಥಾಪಿಸಬೇಕೆಂಬ ಹಂಬಲವನ್ನು ಹೊತ್ತುಕೊಂಡಿದ್ದಾರೆ.

ಸೇವಾ ಕಾರ್ಯಕ್ಕೆ ಭ್ರಷ್ಟಾಚಾರದ ಅಡ್ಡಗಾಲು

ಇಷ್ಟೆಲ್ಲ ಸೇವಾಕಾರ್ಯಗಳಿಗೆ ವಿವಿಧ ಸರ್ಕಾರಿ ಇಲಾಖೆಗಳ ನೆರವು ಪಡೆಯಬೇಕಲ್ಲ ಎಲ್ಲ ಸುಸೂತ್ರವಾಗಿ ಆಗುತ್ತದೆಯೆ ಅಥವಾ ಈ ಕ್ಷೇತ್ರದಲ್ಲೂ ಲಂಚಗುಳಿತನದ ಹಾವಳಿ ಇದೆಯೆ?

"ಅಯ್ಯೋ, ಇದ್ಯಾಕ್ಕೇಳ್ತೀರಿ? ಈಗೆಲ್ಲ ಹಿಂದಿನ ಹಾಗಿಲ್ಲ. ಯಾವ ಕಾರ್ಯವಾದರೇನು? ಅಧಿಕಾರಿಗಳಿಗೆ, ಸಿಬ್ಬಂದಿಗೆ ಲಂಚ ಬೇಕು. ಅದಕ್ಕೆ ಅನುಗುಣವಾಗಿ ಈಗ ಅಂಥವೇ 'ಸೇವಾ ಸಂಸ್ಥೆ'ಗಳು ಎಲ್ಲ ಕಡೆಯೂ ತಲೆಯೆತ್ತುತ್ತಿವೆ. ಯಾವುದೇ ಸ್ಕೀಮನ್ನು ನಮಗೆ ಕೊಡುವುದಕ್ಕಿಂತ ಅಂಥ ಸಂಸ್ಥೆಗಳಿಗೆ ಕೊಟ್ಟರೇ ಅವರಿಗೆ ಲಾಭ. ಹಾಗಾಗಿ ಈಗ ಮೊದಲಿನಂತೆ ನಡೆಸಲು ಆಗುತ್ತಿಲ್ಲ." ಎನ್ನುತ್ತಾರೆ ಸಾವಿತ್ರಮ್ಮ.

ನಾವು ಮಾತ್ರ, ಆಸ್ಪತ್ರೆಯಲ್ಲಿ ಹೊರತು ಮತ್ತೆಲ್ಲೂ ಲಂಚ ಕೊಟ್ಟಿಲ್ಲ. ಅಲ್ಲಾದರೆ, 'ನಮ್ಮ ಪೇಶೆಂಟ್ ಬದುಕಿ ಬಂದರೆ ಸಾಕು' ಎಂಬುದಕ್ಕಾಗಿ ಕೊಡಬೇಕಾಗುತ್ತದೆ. ಮತ್ತೆಲ್ಲಾದರೂ ಅದರ ಮೇಲಧಿಕಾರಿಗಳಿಗೆ ದೂರು ಕೊಟ್ಟು ಸರಿಪಡಿಸಿಕೊಳ್ಳಲು ಯತ್ನಿಸುತ್ತೇವೆ.

ಯೋಜನೆಗಳ ಪ್ರಚಾರ ಅಗತ್ಯ

ಬಡಜನರಿಗೆ, ನಿರ್ಗತಿಕರಿಗೆ ಅನುಕೂಲಕರವಾದ ವಿವಿಧ ಯೋಜನೆಗಳು ಎಲ್ಲಾ ಇಲಾಖೆಗಳಲ್ಲೂ ಇವೆ. ಆದರೆ ಅವುಗಳ ಬಗ್ಗೆ ಜನರಿಗೆ ಏನೇನೂ ಗೊತ್ತಿರುವುದಿಲ್ಲ. ನಮಗೇ ಎಷ್ಟೋ ವಿಚಾರ ತಿಳಿದಿರುವುದಿಲ್ಲ. ಈ ಯೋಜನೆಗಳ ಬಗ್ಗೆ ಹಳ್ಳಿಗಳಲ್ಲಿ ಸರಿಯಾದ ಪ್ರಚಾರ ಅಗತ್ಯ ಎನ್ನುತ್ತಾರೆ ಸಾವಿತ್ರಮ್ಮ.

ಯೋಜನೆಗಳ ಬಗ್ಗೆ ಜನ ಸಾಮಾನ್ಯರಿಗೆ ಗೊತ್ತಾಗುವುದಿಲ್ಲ. ಗೊತ್ತಾದರೂ ಸಿಬ್ಬಂದಿಗಳು ಲಂಚದಾಸೆಯಿಂದ ಅರ್ಹರಿಗೆ ಪ್ರಯೋಜನ ದೊರಕಲು ಬಿಡುವುದಿಲ್ಲ. ಈ ಎರಡು ಸಮಸ್ಯೆಗಳಲ್ಲದೆ ಇನ್ನೊಂದು ಬಹುಮುಖ್ಯ ಸಮಸ್ಯೆಯೆಂದರೆ ಸಾಕಷ್ಟು ಗ್ರಾಂಟ್‌ನ ಕೊರತೆ. ಹರಿಗೋಲು ಭಿಕ್ಷೆಯಿಂದ ಹಿಡಿದು ಜನತಾ ಮನೆ ಯವರೆಗೆ ಪ್ರತಿಯೊಂದಕ್ಕೂ "ಗ್ರಾಂಟ್ ಮುಗಿದು ಹೋಗಿದೆ. ಗ್ರಾಂಟ್ ಬಂದ ಮೇಲೆ ಮಂಜೂರು ಮಾಡೋಣ" ಎಂಬ ಉತ್ತರ ಈ ಇಲಾಖೆಗಳಲ್ಲಿ ಬಹಳ ಮಾಮೂಲು.

ಆದರೆ ಎಷ್ಟೋ ಸ್ಕೀಮುಗಳಲ್ಲಿ ಇದ್ದಷ್ಟು ಗ್ರಾಂಟ್ ಕೂಡ ಪ್ರಯೋಜನವಾಗದಂತೆ ಅರ್ಜಿಗಳಿಲ್ಲದೆ ವಾಪಸ್ಸು ಹೋಗುವುದಿದೆ. ಸರಿಯಾದ ಪ್ರಚಾರವಿದ್ದರೆ ಅದನ್ನು ದರ್ಶ ತಪ್ಪಿಸಬಹುದು ಎಂಬುದು ಅವರ ಅಭಿಪ್ರಾಯ.

ಇದೀಗ ಸ್ವಾತಂತ್ರ್ಯ ಹೋರಾಟಗಾರರ ವಿಶ್ರಾಂತಿವೇತನ ಪಡೆಯುತ್ತಿರುವುದರಿಂದ 'ವಿಶ್ರಾಂತ'ರೆನ್ನಿಸಿಕೊಂಡರೂ ಮಾನಸಿಕವಾಗಿ ಮತ್ತು ಎಲೆ ಮರೆಯ ಕಾಯಿಯಂತೆ ಈಗಲೂ ಬಸವಾನಿ ಮತ್ತು ತೀರ್ಥಹಳ್ಳಿ ತಾಲೂಕಿನ ಹಲವು ಸೇವಾ ಚಟುವಟಿಕೆಗಳಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶಕರಾಗಿರುವ ಶ್ರೀಮತಿ ಸಾವಿತ್ರಮ್ಮನವರ ಜೀವನ–ಆದರ್ಶಗಳು ನಮಗೆಲ್ಲ ಮೇಲ್ಪಂಕ್ತಿಯಾಗುವಂಥವು.

ಬಸವಾನಿ ರಾಮಶರ್ಮ

(2ನೇ ಪುಟದಿಂದ)

ವಾದಿಗಳು ಅದರಲ್ಲಿ ಭಾಗವಹಿಸಿದರು.")

ಭೂದಾನ ಚಳುವಳಿ, ಸರ್ವೋದಯ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿಗಳಲ್ಲೂ ಭಾಗವಹಿಸಿದ ರಾಮಶರ್ಮ ಅವರು, ಸಾಹಿತಿ ಮತ್ತು ಪತ್ರಕರ್ತರಾಗಿಯೂ ದುಡಿದಿದ್ದಾರೆ. ಜಿಲ್ಲಾ ಕೇಂದ್ರ ಗ್ರಂಥಾಲಯದ ಬಸವಾನಿ ಶಾಖೆ ರಾಜ್ಯದಲ್ಲೇ ಮೊಟ್ಟ ಮೊದಲ ಗ್ರಾಮೀಣ ಶಾಖೆಯಾಗಿದೆ ಸ್ಥಳೀಯ ಕರ್ನಾಟಕ ಸಂಘ, ಕಿರಿಯ ಕಾಲೇಜು, ಊರಿಗೆ ರಸ್ತೆ ದೀಪ— ಹೀಗೆ ಊರಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತ ಬಂದಿದ್ದಾರೆ ಇಂದಿಗೂ ಸಹ ಇಲ್ಲಿನ ಎಲ್ಲ ಸಾಮಾಜಿಕ ಚಟುವಟಿಕೆಗಳಲ್ಲೂ ಇವರ ಪ್ರಭಾವ ಅಚ್ಚೊತ್ತಿರುತ್ತದೆ.

ಶ್ರೀಮತಿ ಪದ್ಮಾ ರಾಮದಾಸ್ ಸ್ಮಾರಕ ಸಂಸ್ಥೆ

(2ನೇ ಪುಟದಿಂದ)

ಈ ಸಂಸ್ಥೆಯ ಆಶ್ರಯದಲ್ಲಿ ಟೈಪಿಂಗ್ ಶಾಲೆ, ಸಿದ್ಧ ಉಡುಪು ತಯಾರಿಕೆ ಘಟಕ (ಸ್ಥಳೀಯ ಮಹಿಳೆಯರಲ್ಲದೆ 10 ಜನರಿಗೆ ವಸತಿ ಸಹಿತ ಸೌಕರ್ಯವಿದೆ), 50 ಜನ ನೈಯಕ್ತಿಕ ಫಲಾನುಭವಿಗಳ ಹಾಲು ಉತ್ಪಾದನಾ ಘಟಕ, ಮಕ್ಕಳ ಮನೆ ಬಿದಿರು ಕೈಗಾರಿಕೆ, 30 ರಾತ್ರಿ ಶಾಲೆಗಳು ಮುಂತಾದ ಚಟುವಟಿಕೆಗಳು ನಡೆಯುತ್ತಿವೆ. [illegible] ಹಿಂದಿ, ಗಣಕ ತರಗತಿಗಳು, [illegible] ಗಳೂ ಇವೆ. ಎಸ್ಸೆಸ್ಸೆಲ್ಸಿ [illegible] ಕೋರ್ಸ್ 1984 ರಿಂದೀಚೆಗೆ [illegible] ಅಗತ್ಯ ಪ್ರಮಾಣದ ಗ್ರಾಂಟ್ [illegible] ನ್ನು ಮುಂದುವರಿಸುವ ಪ್ರಯತ್ನ [illegible] ಯುತ್ತಿದೆ.

ಬಸ್ ಲೈನು, ಪರ್ಮಿಟ್‌ಗಳ ಮಾರಾಟಕ್ಕೆ

ಶಂಕರ್ ಕಾರ್ಮಿಕರ ಕಟು ವಿರೋಧ

ಕೊಪ್ಪ : ಇಲ್ಲಿನ ಶಂಕರ್ ಸಾರಿಗೆ ಸಂಸ್ಥೆ ತನ್ನ ಕೆಲವು ಬಸ್ ಲೈನು ಮತ್ತು ಪರ್ಮಿಟ್‌ಗಳನ್ನು ಬೇರೆ ಕಂಪೆನಿಗಳಿಗೆ ಮಾರುವುದನ್ನು ಅಲ್ಲಿನ ಕಾರ್ಮಿಕರ ಸಂಘ ಕಟುವಾಗಿ ವಿರೋಧಿಸಿದೆ.

ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ಸಂಘದ ಪ್ರಧಾನ ಕಾರ್ಯದರ್ಶಿ ಎಚ್. ಎಂ. ರೇಣುಕಾರಾಧ್ಯ, ಇದೊಂದು ಕಾರ್ಮಿಕರಲ್ಲಿ ಅಭದ್ರತೆ ಮೂಡಿಸಿ, ಕಾರ್ಮಿಕ ಸಂಘವನ್ನು ಮುರಿಯುವ ಕಾರ್ಮಿಕ ವಿರೋಧಿ ನಡವಳಿಕೆ ಎಂದು ವರ್ಣಿಸಿದ್ದಾರೆ.

ಐವತ್ತು ವರ್ಷಕ್ಕೂ ಮಿಕ್ಕಿದ ಕಂಪೆನಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕಳೆದ ಎರಡು ವರ್ಷಗಳಿಂದ ಕಾರ್ಮಿಕರು ಸಂಘಟಿತರಾಗಿ, ತಮ್ಮ ಹಕ್ಕು, ಸವಲತ್ತುಗಳಿಗಾಗಿ ಹಾಗೂ ಉತ್ತಮ ದುಡಿಮೆ ಪರಿಸ್ಥಿತಿಗಳಿಗಾಗಿ ಹೋರಾಡುತ್ತಿದ್ದಾರೆ. ಆದರೆ ಮಾಲೀಕ ವರ್ಗ ಕಾರ್ಮಿಕರ ಕಾನೂನು ಬದ್ಧ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಮತ್ತು ಅವರ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆ ಯಾವುದೇ ಆರೋಗ್ಯಕರವಾದ, ಫಲಪ್ರದವಾದ ನಿಲುವನ್ನೂ ತಾಳದೆ, ಕೇವಲ ಸಂಘಟನೆಯನ್ನು ಒಡೆಯುವ ಕುಟಿಲ ತಂತ್ರಗಳನ್ನೇ ಮುಂದುವರಿಸುತ್ತಿದ್ದಾರೆ. ಇದೇ ಕಾರಣಕ್ಕೆ ತಾ|| 18 7.87ರಿಂದ 27.7. 87ರವರೆಗೆ ಕಾರ್ಮಿಕರು ಮುಷ್ಕರ ನಡೆಸಬೇಕಾಗಿ ಬಂದ ಸಂದರ್ಭ ನಿಮ್ಮ ಗಮನಕ್ಕೂ ಬಂದಿದೆ ಎಂದು ಸಂಘ ಜಿಲ್ಲಾಧಿಕಾರಿಗಳಿಗೆ ಜ್ಞಾಪಿಸಿದೆ.

ಹೀಗೆ ಲೈನು, ಪರ್ಮಿಟ್‌ಗಳನ್ನು ಮಾರುವುದು, ತಮ್ಮ ಬಸ್‌ಗಳನ್ನು ಬೇರೆಯವರಿಗೆ ಕಾಂಟ್ರಾಕ್ಟ್ ಕೊಟ್ಟು ಓಡಿಸುವುದು– ಈ ರೀತಿ ಮಾಡುತ್ತ, ಆ ಬಸ್‌ಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರಿಗೆ ಅವಮಾನಕರ, ವಜಾ, 'ಸ್ಪೇರ್' ಕೂರಿಸುವುದು ಮುಂತಾದ ರೀತಿಯಲ್ಲಿ ಕಿರುಕುಳ ಕೊಟ್ಟು ಹಂತ ಹಂತವಾಗಿ ಕಾರ್ಮಿಕರನ್ನು ಬೀದಿ ಪಾಲು ಮಾಡುತ್ತಿದ್ದಾರೆ ಇದರಿಂದ ಕಾರ್ಮಿಕರಲ್ಲಿ ಪುನಃ ಅಶಾಂತಿ ತಲೆದೋರುವ ಸಾಧ್ಯತೆ ಇದೆ ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ.

ಜಿಲ್ಲಾ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿಗಳು ಮಾಲೀಕರ ಈ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಿ, ಕಾರ್ಮಿಕರಿಗೆ ಕೆಲಸದ ಭದ್ರತೆ ಮತ್ತು ಅನುಕೂಲತೆಗಳನ್ನು ಒದಗಿಸಲು ನೆರವಾಗಬೇಕೆಂದು ಆರಾಧ್ಯ ಮನವಿ ಮಾಡಿದ್ದಾರೆ.

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ

ಹರಿಹರಪುರ : ಇಲ್ಲಿನ ರಾಷ್ಟ್ರೋತ್ಥಾನ ಬಳಗ 9-1-1988ರಂದು ಶೃಂಗೇರಿ, ಕೊಪ್ಪ, ನ. ರಾ. ಪುರ ತಾ|| ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳ ಚರ್ಚಾ ಸ್ಪರ್ಧೆ ಏರ್ಪಡಿಸಿದೆ. ಪ್ರತಿಯೊಂದು ಶಾಲೆಯಿಂದಲೂ ಇಬ್ಬರು ಸ್ಪರ್ಧಿಸಲು ಅವಕಾಶವಿದ್ದು, ಸ್ಪರ್ಧಿಗಳಿಗೆ ಊಟದ ವ್ಯವಸ್ಥೆಯಿದೆ. ಪ್ರವೇಶವನ್ನು 7-1-1988ರೊಳಗೆ ಬಳಗದ ಸಂಚಾಲಕರಿಗೆ ಕಳಿಸಬೇಕು.

ನೂತನ ಪದಾಧಿಕಾರಿಗಳು

ಬಳಗಕ್ಕೆ 1988ನೇ ಸಾಲಿಗೆ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಗಿದ್ದು, ಎ. ರಾಘವಾಚಾರ್ ಅಧ್ಯಕ್ಷರಾಗಿ ಸಿ.ಎಸ್. ಛಾಯಾಪತಿ ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ.